ಗೊತ್ತಾಗುತ್ತದೆ. ಮೊಬೈಲ್‌ಕ್ಯಾಷ್ ಕೌಂಟರ್ ಅನ್ನು ವಿಸ್ತರಿಸಿದರೆ ಬಹಳ ಒಳ್ಳೆಯದೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.— ಅದನ್ನು ಪರಿಶೀಲನೆ ಮಾಡುತ್ತೇನೆ.

ಬೇಡ್ತಿ ಯೋಜನೆ ಕಾರ್ಯಗತಗೊಳಿಸಿರುವ ಬಗ್ಗೆ ಪರಿಶೀಲನಾ ಸಮಿತಿ

೩೧೯೩. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).— ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ಜಲವಿದ್ಯುತ್ ಯೋಜನೆ ಕೆಲಸವನ್ನು ಎಂದು ನಿಲ್ಲಿಸಲಾಯಿತು ?

ಆ) ಯಾವ ದಿನಾಂಕದಂದು ಈ ಯೋಜನೆಯ ಬಗ್ಗೆ ಅಭ್ಯಸಿಸಲು ಕಮಿಟಿಯೊಂದನ್ನು ನಿಯುಮಿಸಲಾಯಿತು ಮತ್ತು ಕಮಿಟಿಯ ಸದಸ್ಯರು ಯಾರು ಯಾರು ?

ಇ) ಈ ಕಮಿಟಿ ತನ್ನ ವರದಿಯನ್ನು ಸರ್ಕಾರಕ್ಕೆ ಯಾವಾಗ ಒಪ್ಪಿಸಿದೆ ?

ಈ) ಈ ಕಮಿಟಿಯು ವರದಿಯನ್ನು ಯಾವಾಗ ಸದನದ ಮುಂದೆ ಮಂಡಿಸಲಾಗುವುದು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ರಾಜ್ಯ ಸರ್ಕಾರವು ತನ್ನ ಪತ್ರ ನಂ. ಪಿಡಬ್ಲ್ಯೂಡಿ ೩೪೪ ಪಿಪಿಸಿ ೮೧ ದಿನಾಂಕ ೫–೧೨–೭೯ ರಲ್ಲಿ ತಿಳಿಸಿದಂತೆ ಈ ಯೋಜನೆಯ ಕೆಲಸಗಳನ್ನು ಡಿಸೆಂಬರ್ ೧೯೭೯ ರಲ್ಲಿ ನಿಲ್ಲಿಸಲಾಯಿತು.

ಆ) ಸರ್ಕಾರವು ತನ್ನ ಪತ್ರ ನಂ. ಪಿಡಬ್ಲ್ಯೂಡಿ ೯ ಪಿಪಿಸಿ ೮೧ ದಿನಾಂಕ ೧೩–೧–೮೧ ಮತ್ತು ೨೨–೩–೧೯೮೧ರಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿತ್ತು.

ಶ್ರೀಯುತರಾದ		
೧) ಹೆಚ್. ವಿ. ನಾರಾಯಣರಾವ್	...	ಅಧ್ಯಕ್ಷರು
೨) ಜಿ. ಕರ್. ಮಾವಿನಕುರ್ವೆ	...	ಸದಸ್ಯ
೩) ಬಿ. ಸಿ. ಅಂಗಡಿ	...	ಸದಸ್ಯ
೪) ಕೆ. ಸಿ. ರೆಡ್ಡಿ	...	ಸದಸ್ಯ
೫) ಎಂ. ಎ. ಪಾರ್ಥಸಾರಥಿ	...	ಸದಸ್ಯ
೬) ಸಿಸಿಲ್. ಜಿ. ಸಾಲ್ಡಾನ	...	ಸದಸ್ಯ

(ತಾ: ೨–೩–೧೯೮೧)

ಇ) ಈ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ದಿನಾಂಕ ೩–೪–೧೯೮೬ ರಂದು ಸಲ್ಲಿಸಿತು.

ಈ) ಕಾರವಾರ ಜಿಲ್ಲೆ ಮತ್ತು ಅಕ್ಕಪಕ್ಕ ಪ್ರದೇಶದ ಜೀವಿ ಪರಿಸ್ಥಿತಿ ವ್ಯವಸ್ಥೆಯನ್ನು (ಎಕೊಸಿಸ್ಟಮ್) ಅಭ್ಯಸಿಸಬೇಕೆಂದು ಸರ್ಕಾರವು ನಿರ್ಧರಿಸಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ವಿದ್ಯುತ್ ನಿಗಮವನ್ನು ದಿನಾಂಕ ೧–೭–೧೯೮೬ ರಂದು ಕೋರಲಾಗಿದೆ.

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಲ್ಲಿ ಎರಡು ವರ್ಷಗಳ ಹಿಂದೆ ಒಂದು ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಮಾಡಲಾಗಿತ್ತು ಎಂದು ಹೇಳಿದ್ದಾರೆ. ಆ ಎಕ್ಸ್‌ಪರ್ಟ್ಸ್ ಕಮಿಟಿ ರಿಪೋರ್ಟನ್ನು ಪಡೆದುಕೊಂಡಿದ್ದಾರೊ ಏನೋ ಗೊತ್ತಿಲ್ಲ ನಾನು ಈ ವಿಚಾರವನ್ನ ಬಹಳ ಸಲ ಕೇಳಿದ್ದೇನೆ. ಬೇಡ್ತಿ ಯೋಜನೆಯ ಬಗ್ಗೆ ಎಕ್ಸ್‌ಪರ್ಟ್ಸ್

ಕಮಿಟಿಯ ರಿಪೋರ್ಟ್ ಏನಿದೆ ಅದನ್ನು ಸದನದ ಮುಂದೆ ಇಟ್ಟಿಲ್ಲ. ಅದನ್ನು ಇಲ್ಲಿ ಇಟ್ಟರೆ ಏನೂ ಅಪಾಯವಿಲ್ಲ. ಇನ್ನೊಂದು ವಿಚಾರ ಏನೆಂದರೆ ಇಕಲಾಜಿಕಲ್ ಸಿಸ್ಟಮ್ ಸ್ಟಡಿ ಮಾಡಿಸುತ್ತೇವೆ, ಅದನ್ನು ಕರ್ನಾಟಕ ವಿದುತ್ ನಿಗಮದವರಿಗೆ ಕೊಟ್ಟಿದ್ದೇವೆಂದು ಉತ್ತರ ಕೊಡುತ್ತಿದ್ದಾರೆ, ಮಾನ್ಯ ಮಂತ್ರಿಗಳು ನೇರವಾಗಿ ಉತ್ತರ ಕೊಡಬೇಕು, ಸದನದ ಮುಂದೆ ಎಕ್ಸ್‌ಪರ್ಟ್ಸ್ ಕಮಿಟಿಯ ರಿಪೋರ್ಟನ್ನು ಯಾವಾಗ ಇಡುತ್ತೀರಿ ? ಆ ರಿಪೋರ್ಟ್‌ನಲ್ಲಿ ಪರಿಣಿತರು ಬೇಡ್ತಿ ಯೋಜನೆಗೆ ಅನುಮತಿಯನ್ನು ಕೊಟ್ಟಿದ್ದಾರೆಯೇ ಅಥವಾ ಮಾಡುವುದು ಬೇಡವೆಂದು ಹೇಳಿದ್ದಾರೆಯೇ ಅವರು ಏನು ರಿಪೋರ್ಟ್ ಕೊಟ್ಟಿದ್ದಾರೆಂಬುದು ಗೊತ್ತಾಗಬೇಕು. ಅವರು ಮಾಡಬೇಕೆಂದು ಹೇಳಿದ್ದರೆ ನೀವು ಬೇಡ್ತಿ ಯೋಜನೆಯನ್ನು ಮಾಡಲೇ ಬೇಕಾಗುತ್ತದೆ. ಇನ್ನೊಂದು ಕಮಿಟಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ, ನಮ್ಮ ಜಿಲ್ಲೆಯಲ್ಲಿ ಯಾವುದೆ ಒಂದು...

ಅಧ್ಯಕ್ಷರು. — ಮಾನ್ಯ ಸದಸ್ಯರು ನೇರವಾಗಿ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಆರ್. ಏನ್. ನಾಯಕ್. — ನಾನು ಕೇಳುತ್ತಿರುವುದು ನೇರವಾಗಿ ಅಲ್ಲದೆ ಅಡ್ಡವಾಗಿ ಕೇಳಲಿಲ್ಲ. ನಾನು ಹೇಳುತ್ತಿರುವುದು ನಮ್ಮ ಜಿಲ್ಲೆಯಲ್ಲಿ.....

ಶ್ರೀ ಜೆ. ಹೆಚ್. ಪಟೇಲ್. — ಮೊದಲನೆಯದಾಗಿ, ಮಾನ್ಯ ಸದಸ್ಯರು ಎಕ್ಸ್‌ಪರ್ಟ್ಸ್ ಕಮಿಟಿ ರಿಪೋರ್ಟ್ ಬಂದಿದ್ದರೆ ಅದನ್ನು ಸಭೆಯ ಮುಂದಿಡಬೇಕೆಂದು ಹೇಳುತ್ತಿದ್ದಾರೆ, ಅದನ್ನು ಸಭೆಯ ಮುಂದಿಡುವ ಅವಶ್ಯಕತೆಯಿಲ್ಲ. ಈ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಈ ಬಗ್ಗೆ ಅನೇಕ ಸಲ ಕೇಳಿದ್ದಾರೆ, ನನಗೆ ಒಂದು ಸಂತೋಷವಾಗುತ್ತದೆ, ಏನೆಂದರೆ, ಕಾರವಾರ ಜಿಲ್ಲೆಯಿಂದ ಬಂದಿರತಕ್ಕ ಮಾನ್ಯ ಸದಸ್ಯರು ಬೇಡ್ತಿ ಯೋಜನೆ ಜಾರಿ ಮಾಡಬೇಕೆಂದು ಹೇಳುತ್ತಿದ್ದಾರೆ, ಅದನ್ನು ಸ್ವಾಗತ ಮಾಡುತ್ತಿದ್ದೇನೆ. ನಿಜವಾಗಿಯೂ ಅವರ ಮಾತನ್ನು ಸ್ವಾಗತಿಸುತ್ತೇನೆ. ಸರ್ಕಾರದ ದೃಷ್ಟಿಯಿಂದ, ಜನತೆಯ ದೃಷ್ಟಿಯಿಂದ ಇದು ಬಹಳ ಯೋಗ್ಯವಾದ ಯೋಜನೆಯಿದೆ. ಅಲ್ಲಿಯ ಜನ ನಮ್ಮ ಪರಿಸರ ಹಾಳಾಗುತ್ತದೆ, ನಮ್ಮ ತೋಟಗಳು ಹೋಗುತ್ತವೆ ಈ ಯೋಜನೆಯನ್ನು ಜಾರಿಗೆ ತರುವುದು ಬೇಡವೆಂದು ಹೇಳುತ್ತಿದ್ದಾರೆ. ಕೈಗಾ ಯೋಜನೆ ಮಾಡಲಿಕ್ಕೆ ಕೂಡ ವಿರೋಧ ಮಾಡುತ್ತಿದ್ದಾರೆ. ಕೈಗಾ ಹಾಗೂ ಬೇಡ್ತಿ ಯೋಜನೆಗಳು ರಾಷ್ಟ್ರಕ್ಕೆ ಹಾಗೂ ರಾಜ್ಯಕ್ಕೆ ತುಂಬಾ ಅವಶ್ಯಕತೆಯಿರತಕ್ಕ ಯೋಜನೆಗಳು. ಇದು ಮೊದಲಿನಿಂದಲೂ ಅವರಿಗೆ ಗೊತ್ತಿದೆ. ನಾನು ಇಷ್ಟು ಮಾತ್ರ ಹೇಳುತ್ತೇನೆ, ಮಾನ್ಯ ಸದಸ್ಯರು ಕಾರವಾರ ಜಿಲೆಯಲ್ಲಿ ಜನ ವಿರೋಧ ಮಾಡದಹಾಗೆ ಅವರು ನೋಡಿಕೊಂಡರೆ, ಅವರು ತಮ್ಮ ಪ್ರಭಾವವನ್ನು ಬೀರಿ ಆ ಕೆಲಸ ಮಾಡಿದರೆ ಸರ್ಕಾರ ನಿಜವಾಗಿಯೂ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತದೆ, ಪರಿಸ್ಥಿತಿ ಮಾನ್ಯ ಸದಸ್ಯರಿಗೆ ಗೊತ್ತಿದೆ ಎಕ್ಸ್‌ಪರ್ಟ್ಸ್ ಕಮಿಟಿಯವರು ಮಾಡಲೂ ಬಹುದು, ಮಾಡದೇ ಇರಲೂ ಬಹುದು ಎಂದು ಹೇಳಿದ್ದಾರೆ. ನಾವು ತೀರ್ಮಾನ ಮಾಡಿದರೆ ಮಾಡಬಹುದು ಅಥವಾ ಬಿಡಬಹುದು. Experts do not agree with each other. ಎಕ್ಸ್‌ಪರ್ಟ್ಸ್ ಕಮಿಟಿಯಲ್ಲಿ ಮೂರು ಜನ ಮಾಡಬೇಕೆಂದು ಹೇಳಿದರೆ, ಮೂರು ಜನ ಮಾಡಬಾರದೆಂದು ಹೇಳಿದ್ದಾರೆ ಹೈಟ್ ಕಡಿಮೆ ಮಾಡಿದ್ದಾರೆ ಕುಸುಳುಗಡೆಯಾಗುವಂತಹ ಭೂಮಿಯನ್ನು ಕಡಿಮೆ ಮಾಡಬಹುದೆಂದು ಒಬ್ಬರು ಹೇಳುತ್ತಾರೆ. That is not the poin now.

ಶ್ರೀ ಎಸ್. ಬಂಗಾರಪ್ಪ. — ಫೈನಲ್ ರಿಪೋರ್ಟ್ ಏನು ?

SRI J.H PETAL.— Final report is divided opinion. ಅದು ಬೇರೆ ಮಾಡಲೇಬೇಕೆಂದು ಅವರು ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ. — ಮೆಜಾರಿಟಿ ಒಪೀನಿಯನ್ ಏನಿದೆ ? ಕಮಿಟಿ ಆ ಬಗ್ಗೆ ಏನೂ ಹೇಳಲಿಲ್ಲವೆ ?

SRI J. H. PATEL.— Each member has expressed his considered opinion and they have not recommended anything to the Goverument as on to-day

ಶ್ರೀ ಎಸ್. ಬಂಗಾರಪ್ಪ.—ಮತ್ತೆ ಎಕ್ಸ್‌ಪರ್ಟ್ಸ್ ಯಾರು ?

ಶ್ರೀ ಜೆ. ಎಚ್. ಪಟೇಲ್.— ಯಾವಾಗ ಒಬ್ಬರಿಗೊಬ್ಬರು ಒಪ್ಪದೇ ಇದ್ದಾಗ ಅವರು ಎಕ್ಸಪರ್ಟ್ ಆಗುತ್ತಾರೆ. ಮಾನ್ಯ ಅಧ್ಯಕ್ಷರೇ ಈಗಲೂ politically this Government is prepared to go-ahead with this project. ಆಲ್ಲಿ ಲೋಕಲ್ ಅಬ್ಸ್ಟ್ಯಾಕ್ಷನ್, ಲೋಕಲ್ ಆಪೊಸಿಶನ್ ಬಹಳ ಇದೆ, ಇದರಿಂದ ಎಕ್ಸಪರ್ಟ್ಸ್ ಹೇಳಿದ್ದನ್ನು ನಾವು ಕೇಳಬಹುದು ಅಥವಾ ಕೇಳದೇ ಇರಬಹುದು, ಆ ಸ್ಥಿತಿ ಇದೆ.

ಶ್ರೀ ಆರ್. ಎನ್. ನಾಯಕ್.— ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ತಮ್ಮ ಮನಸ್ಸಿನಲ್ಲಿ ಏನಿದೆ, ಅದನ್ನು ಹೇಳಿದನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಇಲ್ಲಿ ಪ್ರಾಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ಯಾವುದೇ ಯೋಜನೆಗಳು ಬರಲಿ, ಅಲ್ಲಿ ಒಂದು ತರಹ ಸೆಟ್ ಆಫ್ ಪೀಪಲ್ ಇದ್ದಾರೆ, ಅವರು ಏನು ಮಾಡುತ್ತಾರೆ ಎಂದರೆ, ಅದಕ್ಕೆ ವಿರೋಧ ಮಾಡುವುದೇ ಅವರ ಕಸುಬು. ಅವರೇನೂ ಮಹಾ ಮಹಾ ಸಂಖ್ಯೆಯಲ್ಲಿಲ್ಲ. ನಮ್ಮ ಜಿಲ್ಲೆಯ ವಾಸ್ತವಿಕ ತಪ್ಪಾಗಿ ಗೊತ್ತಿದೆ, ನಾನು ಹೇಳುತ್ತೇನೆ, ಈ ಜುಜುಬಿ ಸಂಖ್ಯೆಯಲ್ಲಿರುವ ಜನ ಉಳಿದವರಿಗೆ ಅನುಕೂಲವಾಗುವಂಥ ರಾಷ್ಟ್ರಕ್ಕೆ ಅನುಕೂಲವಾಗುವಂಥ ಯೋಜನೆಯನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡಿದರೆ ಧೀರರಾದ ನೀವು ಏಕೆ ಅದನ್ನು ಒಪ್ಪಿಕೊಳ್ಳಬೇಕು? ಸರ್ಕಾರದ ಬಲವನ್ನು ಉಪಯೋಗಿಸಿ ಅವರನ್ನು ಬಂದೋಬಸ್ತಿನಲ್ಲಿಟ್ಟು ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಯಾವುದೋ ನಮ್ಮ ರಾಮಕೃಷ್ಣ ಪೆಗಡೆಯವರ ಅಥವಾ ಇನ್ನೊಬ್ಬರ ಹಾಗೂ ಅವರ ಕೆಲವು ಸಂಬಂಧಿಕರ ತೋಟ ಹೋಗುತ್ತದೆ ಎನ್ನುವ ಕಾರಣಕ್ಕಾಗಿ ಈ ರೀತಿ ಗಲಾಟೆ ಮಾಡಿದರೆ ಅದು ಪ್ರಯೋಜನ ಆಗುವುದಿಲ್ಲ,

ಶ್ರೀ ಜೆ. ಎಚ್. ಪಟೇಲ್.— ಅವರು ಯಾವ ಉದ್ದೇಶದಿಂದ ಕೇಳಿದ್ದಾರೆ, ಏನು ಹೇಳಿದ್ದಾರೆ ಅದನ್ನು ನಾನು ಅರ್ಥಮಾಡಿಕೊಂಡಿದ್ದೇನೆ ಉಳಿದ ವಿಷಯಗಳನ್ನು ಈಗ ಪ್ರಸ್ತಾಪ ಮಾಡುವುದು ಬೇಡ. ಈಗ ಕಾರವಾರದಲ್ಲಿ ಬೇಡ್ತಿ ಯೋಜನೆ ಎಕ್ಸಪರ್ಟ್ಸ್ ಹೇಳಿದ ಪ್ರಕಾರ ಬಹಳ ಯೋಗ್ಯವಾದ ಯೋಜನೆಯೆಂದು ಮೊದಲು ಪ್ರಾರಂಭವಾಯಿತು. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಸ್ವಲ್ಪ ಹಣವನ್ನು ಕೂಡ ಖರ್ಚು ಮಾಡಿದರು. ಆದರೆ ಕೊರಲ್ಲಿ ಇದನ್ನು ಏಕೆ ನಿಲ್ಲಿಸಿದರು? ಗೊತ್ತಿಲ್ಲ. ಕೊರ್ಟರಲ್ಲಿದ್ದಂಥ ಸರ್ಕಾರ ಅದನ್ನು ನಿಲ್ಲಿಸಬಾರದಿತ್ತು. They should have gone ahead with this project. ಏನೋ ಒಂದು ಕಾರಣದಿಂದ ನಿಲ್ಲಿಸಿದರು. ಇದನ್ನು ನಿಲ್ಲಿಸಿದ್ದ ಕಾರಣ ಕ್ಕೋಸ್ಕರ ಈಗ ಎಕ್ಸಾಮಿನ್ ಮಾಡುತ್ತಿದ್ದೇವೆ. ನಾನು ಈಗಲೂ ಅದೇ ಮಾತನ್ನು ಹೇಳುತ್ತೇನೆ. ಈ ತರಹ ವಿದ್ಯುತ್ ಯೋಜನೆಗಳಿಗೆ, ಅದು ಕಾರವಾರದಲ್ಲಿ ಇರಬಹುದು, ರಾಯಚೂರಿನಲ್ಲಿ ಇರಬಹುದು ಈ ರೀತಿ ವಿರೋಧ ಮಾಡುತ್ತಾ ಹೋದರೆ ರಾಜ್ಯಕ್ಕೆ ಬಹಳ ಹಾನಿಯಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.— ನಾನು ಈಗ ಒಂದು ಮಾತನ್ನು ಹೇಳುತ್ತೇನೆ. ಕೈಗಾ ಯೋಜನೆಯಾಗಲೀ, ಶರಾವತಿ ಟೇಲ್‌ರೇಸ್ ಯೋಜನೆಯಾಗಲೀ, ಬೇಡ್ತಿ ಯೋಜನೆಯಾಗಲಿ, ಅಘನಾಶಿನಿ ಯೋಜನೆಯಾಗಲೀ, ನಮ್ಮ ಉತ್ತರ ಕರ್ನಾಟಕದಲ್ಲಿ ಇದನ್ನು ಪ್ರಾರಂಭ ಮಾಡಬೇಕು, ಆದರಿಂದ ಈ ರಾಷ್ಟ್ರಕ್ಕೆ ದೇಣಿಯಾಗುತ್ತದೆ ಎನ್ನುವ ವಿಚಾರ ಕಂಡ ಕೂಡಲೇ ಬೇರೆ ಬೇರೆ ಸ್ವಾಮಿಗಳು ಅದನ್ನು ತಡೆಹಿಡಿಯುವುದಕ್ಕೆ ಬಂದು ಬಿಡುತ್ತಾರೆ. ಡಾಕ್ಟರ್ ಶಿವರಾಮ ಕಾರಂತರು ಬರುತ್ತಾರೆ ಅದನ್ನು ತಡೆಹಿಡಿಯುವುದಕ್ಕೆ. ನಮ್ಮ ಪರಿಸ್ಥಿತಿ ಹೇಗೆ ಇದೆ ನೋಡಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಂಗಾಲೀ, ಫರ್ಟಿಲೈಜರ್ಸ್, ಫ್ಯಾಕ್ಟರಿಯಾಗಲೀ, ವಿಮಾನ ನಿಲ್ದಾಣವಾಗಲಿ, ರೈಲ್ವೇ ಸ್ಟೇಷನ್ ಆಗಲಿ ಆದರೆ ಸ್ವಲ್ಪ ಜನ ಮನೆ ಮತಗಳನ್ನು ಕಳೆದುಕೊಳ್ಳುತ್ತಾರೆ. ಡಾಕ್ಟರ್ ಶಿವರಾಮ ಕಾರಂತರಿಗಾಗಲೀ, ಸ್ವಾಮಿಗಳಿಗಾಗಲೀ ಇದು ಗೊತ್ತಾಗುವುದಿಲ್ಲ ಏಕೆಂದರೆ ಅಲ್ಲಿ ಲೋಕಲ್ ಜನ ಏನಿದ್ದಾರೆ ಅವರು ಸಪೋರ್ಟ್ ಮಾಡುವುದಿಲ್ಲ. ಇಲ್ಲಿ ಬಂದು ಬಿಟ್ಟರೆ ಕುಲ ಬಾಂಧವರು ಇದಾರೆ ಅವರನ್ನು ಕರೆದುಕೊಂಡು ಬಂದು ಸಭೆ ಸಮ್ಮೇಳನಗಳನ್ನು ಮಾಡಿಸಿ ಪ್ರಚಾರಕ್ಕೆ ತರುತ್ತಾರೆ. ನನ್ನ ಉದ್ದೇಶ ಏನೆಂದರೆ, ಈ ಅಲ್ಪ ಸ್ವಲ್ಪ ಅಡೆ ತಡೆಗಳು ಯಾವ ಯೋಜನೆಗಳು ಬಂದರೂ ಆಗುತ್ತವೆ. ನಮ್ಮ ಜಿಲ್ಲೆಯಲ್ಲಿ ಇಂತಹ ಯೋಜನೆಗಳು ಬರಬೇಕು, ಇದು ರಾಷ್ಟ್ರಕ್ಕೆ ದೇಣಿಗೆ ಆಗಬೇಕು ಎನ್ನುವುದರಲ್ಲಿ ಬೇರೆ ಭಿನ್ನಾಭಿಪ್ರಾಯ ಇಲ್ಲ. ಅಡಿಕೆ ತೋಟದ ಬಗ್ಗೆ ಹೇಳುತ್ತಾರೆ. ಒಂದು ಅಡಿಕೆ ತೋಟಕ್ಕೆ ೫ ಲಕ್ಷ ರೂಪಾಯಿ ತೆಗೆದುಕೊಳ್ಳಿ. ಏಕೆಂದರೆ ಸರ್ಕಾರ ನಿಮ್ಮದೇ ಇದೆ. ಅವರಿಗೆ

ಯೋಗ್ಯವಾದ ಪರಿಹಾರವನ್ನು ಕೊಟ್ಟು ಈ ಯೋಜನೆಗಳನ್ನು ಪ್ರಾರಂಭ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಜೆ. ಎಚ್. ಪಟೇಲ್.— ಅಧ್ಯಕ್ಷರೇ, ಇದಕ್ಕಿಂತ ಉತ್ತಮವಾದ ಸಲಹೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಬಹಳ ಒಳ್ಳೆಯ ಸಲಹೆ. ಲೋಕಲ್ ಪರಿಸ್ಥಿತಿ ಏನೇ ಇರಲಿ. ರಾಜ್ಯದ ದೃಷ್ಟಿಯಿಂದ ಮತ್ತು ರಾಷ್ಟ್ರ ದೃಷ್ಟಿಯಿಂದ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನಮ್ಮ ಉದ್ಯಮಗಳನ್ನು ಗಮನದಲ್ಲಿಟ್ಟುಕೊಂಡರೆ, ಇವತ್ತು ಕೈಗಾ ಯೋಜನೆಯನ್ನು ವಿರೋಧ ಮಾಡುವುದಾಗಲೀ, ಅಥವಾ ಬೇಡ್ತಿ ಯೋಜನೆಯನ್ನು ವಿರೋಧ ಮಾಡುವುದಾಗಲೀ, ಬಂಪೊಳೆ ಯೋಜನೆಯನ್ನು ವಿರೋಧ ಮಾಡುವುದಾಗಲೀ ಸರಿಯಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರೇ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಪರಿಣತರ ಸಮಿತಿಯು ವರದಿ ಬಂದಿದೆ. ಆದರೆ ಅದು ಬಹುಮಂತದ ರಿಪೋರ್ಟ್ ಅಲ್ಲ, ಗೊಂದಲ ಇದೆ ಎನ್ನುವ ಅಭಿಪ್ರಾಯವನ್ನು ಹೇಳಿದರು. ಈಗ ಬೇರೆ ತಜ್ಞರ ಸಮಿತಿ ಮಾಡಂವುದಕ್ಕೆ ಸರ್ಕಾರಕ್ಕೆ ಬರುವುದಿಲ್ಲ, ಈಗಾಗಲೇ ವರದಿ ಬಂದಿದೆ. ಆದರೆ ಕೆಲವರು ಮಾಡಬಹುದು, ಕೆಲವರು ಮಾಡಬಾರದು, ಇನ್ನು ಕೆಲವರು ಸ್ವಲ್ಪ ನೋಡಿ ಮಾಡೋಣ ಎನ್ನತಕ್ಕಂಥ ವಿಭಿನ್ನ ಅಭಿಪ್ರಾಯಗಳು ಬರಬಹುದು. ಆದರೆ, ನಾನು ಕೇಳುವುದು ಇಷ್ಟೆ, ತಾವು ಹೇಳಿದ ಹಾಗೆ ಇವೆಲ್ಲಾ ರಾಷ್ಟ್ರೀಯ ಆಸ್ತಿ, ರಾಜ್ಯಕ್ಕೆ ಇವು ಆಸ್ತಿ ವಿಚಾರಗಳು. ಮಾನ್ಯ ಸದಸ್ಯರ ಕಳಕಳಿಯಂತೆ, ನನ್ನ ಅಭಿಪ್ರಾಯವೂ ಅಷ್ಟೆ. ಇಂತಹ ಯೋಜನೆಗಳು ಕಾರ್ಯಗತ ಆಗಬೇಕು. ಇವನ್ನು ೧೯೭೯ರಲ್ಲಿ ನಿಲ್ಲಿಸಿದ್ದಾರೆ, ಈಗಾಗಲೇ ೮-೯ ವರ್ಷಗಳಿಂದ. ಇದರ ಬಗ್ಗೆ ಎಷ್ಟೊ ಪರಾಪರಗಳನ್ನು ನೋಡಿದ್ದಾಗಿದೆ. ಸರ್ಕಾರ ತಜ್ಞರ ಸಮಿತಿ ನೇಮಕ ಮಾಡತಕ್ಕಂಥ ಪ್ರಶ್ನೆ ಇಲ್ಲ. ಇಕಲಾಜಿಕಲ್ ಆಗಿ ಕೆ.ಇ ಬಿ.ನವರಿಗೆ ಏನು ವಹಿಸಿದ್ದೀರಿ, ಅವರ ಅಭಿಪ್ರಾಯವನ್ನೂ ತೆಗೆದುಕೊಂಡು ಕಾಲಾವಧಿಯನ್ನೂ ಗಮನದಲ್ಲಿಟ್ಟುಕೊಂಡು ಅಂತಿಮವಾಗಿ ಬೇಡ್ತಿ ಯೋಜನೆಯನ್ನು, ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಜೆ. ಹೆಚ್. ಪಟೇಲ್. ಈಗಾಗಲೇ ಹೇಳಿದ್ದೇನೆ. ಕೆಲವೊಂದು ಯೋಜನೆಗಳ ಬಗ್ಗೆ, ಸರ್ಕಾರದ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕವಾಗಿ ರಾಷ್ಟ್ರ ಮಟ್ಟದಲ್ಲಿ ಚರ್ಚೆ ಮಾಡಬೇಕೆಂದು ಹೇಳಿದ್ದೇನೆ. ಕೈಗಾ ವಿರೋಧ ಮಾಡುವವರಿಗೆ ಹೇಳಬೇಕಾಗುತ್ತದೆ, ಇದಕ್ಕೆ ಬೇರೆ ಉತ್ತರ ಹೇಳ ಬೇಕಾಗುತ್ತದೆ. ಆಟಾಮಿಕ್ ಪವರ್ ಪ್ಲಾಂಟ್ ಬೇಡ, ಥರ್ಮಲ್ ಪ್ಲಾಂಟ್ ಬೇಡ. ಹೈಡ್ರಲ್ ಪ್ರಾಜೆಕ್ಟ್ ಬೇಡ ಎಂದು ಹೇಳುವುದಕ್ಕೆ ಒಂದೊಂದು ಕಾರಣ ಕೊಟ್ಟುಕೊಂಡು ಹೇಳುವುದಕ್ಕಾಗುತ್ತದೆಯೇ? ಈ ವಿಚಾರದಲ್ಲಿ ಯಾರು ಎಷ್ಟೇ ದೊಡ್ಡವರಿರಲಿ, ಇದರ ಅವಶ್ಯಕತೆ ಏನು ಎಂಬ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆ ಮಾಡಬೇಕಾಗಿದೆ. ಹಿಂದಿನ ಸರ್ಕಾರ ಇದನ್ನು ಏಕೆ ನಿಲ್ಲಿಸಿದರು ಎಂಬುದು ಗೊತ್ತಿಲ್ಲ. ಪೊಲಿಟಿಕಲ್ ಆಟ್ರಿಬ್ಯೂಟ್ ಮಾಡುವುದಿಲ್ಲ. ಒಟ್ಟಿನಲ್ಲಿ ರಾಷ್ಟ್ರಮಟ್ಟದ ಚರ್ಚೆ ಆಗಬೇಕಾಗಿದೆ. ಇಂತಹವುಗಳ ಬಗ್ಗೆ ನಾವು ವಿಶಾಲವಾಗಿ ನೋಡಬೇಕು. ಈ ಆಟಾಮಿಕ್ ಪ್ಲಾಂಟ್‌ನಿಂದ ಒಂದು ಸಾವಿರ ವರ್ಷದ ನಂತರ ಗಂಡಾಂತರ ಬರುತ್ತದೆ ಎಂಬ ಕಾರಣದಿಂದ ಇದು ಮಾಡುವುದು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಂ. ರಾಮಪ್ಪ.— ಈ ವಿಚಾರದಲ್ಲಿ ರಾಮಕೃಷ್ಣಹೆಗಡೆಯವರದ್ದೂ ಒಂದು ಭಾಗ ಇದೆ...

ಶ್ರೀ ಜೆ ಹೆಚ್. ಪಟೇಲ್.— ಮೂಲ ಪ್ರಶ್ನೆ ಕೇಳಿರತಕ್ಕಂಥ ಮಾನ್ಯ ಸದಸ್ಯರ ವಿಚಾರವನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಎಕಲಾಜಿಕಲ್ ಬ್ಯಾಲೆನ್ಸ್ ಉಳಿಸಿಕೊಳ್ಳಬೇಕೆಂಬ ಬಗ್ಗೆ ರಾಷ್ಟ್ರೀಯ ಚರ್ಚೆಯಾಗಬೇಕಾಗಿದೆ. ಈಗ ಅವರನ್ನೂ ಒಂದು ಮಾತು ಕೇಳೋಣ: ತಜ್ಞರ ಸಲಹೆಯನ್ನೂ ತೆಗೆದುಕೊಳ್ಳೋಣ. ಈಗ ಶಿವಮೊಗ್ಗದಲ್ಲಿ ಶರಾವತಿ ಯೋಜನೆಯನ್ನು ಮಾಡಬೇಡಿ ಎಂದು ಹೇಳಿದ್ದರೆ ಇವತ್ತು ಒಂದು ಸಾವಿರ ಮೆಗಾವಾಟ್ ವಿದ್ಯುಚ್ಛಕ್ತಿ ಎಲ್ಲಿ ಸಿಗುತ್ತಿತ್ತು. ಆದ್ದರಿಂದ ಎಕಲಾಜಿಕಲ್ ಬಗ್ಗೆ ತಜ್ಞರನ್ನೂ ಕೇಳೋಣ, ಆಮೇಲೆ ಇದನ್ನು ನೋಡೋಣ.